**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ ಬೆಂಗಳೂರು-560 001.**

ಸಂಖ್ಯೆ: ರಾ.ಮಾ.ಶಿ/ಸೆ.ಕೊ/01-2011-12 ದಿನಾಂಕ:03-11-2011

**ಕೊಟೇಶನ್ ಅಹ್ವಾನ**

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ 2011-12 ನೆಯ ಸಾಲಿನಲ್ಲಿ 30 ನೇ ಸೆಪ್ಟಂಬರ್ 2011 ದಲ್ಲಿ ಇರುವಂತಹ ಸೆಮಿಸ್ (ಪ್ರೌಢಶಾಲಾ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಮಾಹಿತಿ) ಮಾಹಿತಿಯನ್ನು, ಸಂಗ್ರಹಿಸುವ ನಮೂನೆಗಳನ್ನು ಮುದ್ರಿಸಿ ಈ ಕಛೇರಿಯಿಂದ ನೀಡುವ ವಿವರದಂತೆ ಜಿಲ್ಲಾ ಹಂತಕ್ಕೆ ವಿತರಿಸುವ ಸಲುವಾಗಿ ದರಪಟ್ಟಿಯನ್ನು ಕರೆಯಲಾಗಿದೆ. ಪ್ರತಿ ನಮೂನೆಗೆ ತಗಲುವ ವೆಚ್ಚದ ಬಗ್ಗೆ ದರವನ್ನು ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 10-11-2011 ರಂದು 5.00 ಗಂಟೆಯೊಳಗೆ ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01 ಇವರಿಗೆ ತಲುಪುವಂತೆ ಸಲ್ಲಿಸುವುದು ಹಾಗೂ ಲಕೋಟೆಯ ಮೇಲೆ **"ಸೆಮಿಸ್ ಪ್ರೌಢಶಾಲಾ ಮತ್ತು ಪದವಿ ಪೂರ್ವ ಶಾಲಾ ಶೈಕ್ಷಣಿಕ ಮಾಹಿತಿ 2011-12 ಮುದ್ರಣಕ್ಕಾಗಿ ದರಪಟ್ಟಿ"** ಎಂದು ನಮೂದಿಸುವುದು. ಇದರ ತಾಂತ್ರಿಕ ವಿಶಿಷ್ಟತೆಯ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವಿಷಯ | Specification |
|---|---|---|
| 1 | ಅಳತೆ ಮತ್ತು ವರ್ಣ | ಡೆಮಿ A4 (Demy A4) ಏಕ ವರ್ಣ(Single Colour) |
| 2 | ಪುಟಗಳ ಸಂಖ್ಯೆ | ಮುಖಪುಟ, ಸೂಚನೆಗಳು ಹಾಗೂ ನಮೂನೆ ಎಲ್ಲಾ ಸೇರಿ 24 ಪುಟಗಳು |
| 3 | ಪ್ರತಿಗಳ ಸಂಖ್ಯೆ | 20000(ಇಪ್ಪತ್ತು ಸಾವಿರ ಪ್ರತಿಗಳು) |
| 4 | ಮುದ್ರಣ ಕಾಗದ ಮತ್ತು ಗುಣ ಮಟ್ಟ | ಮುದ್ರಣಕ್ಕೆ ಬಳಸಬೇಕಾದ ಕಾಗದ 70 ಜಿ.ಎಸ್.ಎಂ ಮುದ್ರಣ ಕಾಗದ (70 GSM Print)<br>1. Whiteness :>98%<br>2. Thickness : 103-110 um.<br>3. Opacity : >94%<br>4. Brightness : 101-104% |
| 5 | ವಿನ್ಯಾಸ | ಪುಸ್ತಕದ ರೂಪದಲ್ಲಿ (Center Pinning) |
| 7 | ಮುದ್ರಣ ಪೂರ್ವ ಕೆಲಸ | ಮುದ್ರಣ ಮಾಡಬೇಕಾದ ನಮೂನೆಗಳ ಮಾಹಿತಿಯನ್ನು ಸಿ.ಡಿ ರೂಪದಲ್ಲಿ ನೀಡಲಾಗುವುದು. |
| 8 | ಕಾಲಾವಧಿ | ಕಾರ್ಯಾದೇಶ ಪಡೆದ 2 ದಿನದೊಳಗೆ ಕರಡು ಪ್ರತಿ ನೀಡಿ ಅನುಮೋದನೆ ಪಡೆಯಬೇಕು. ಪ್ರಿಂಟಿಂಗ್ ಕರಡು ಪ್ರತಿ (Proof) ಅನುಮೋದನೆಗೊಂಡ 7 ದಿನದೊಳಗೆ ನಮೂನೆಗಳನ್ನು ಮುದ್ರಿಸಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೆ ಪ್ರತ್ಯೇಕ ಬಂಡಲ್‌ಗಳನ್ನು ಮಾಡಿ ಜಿಲ್ಲಾ ಡಿಡಿಪಿಐ ಕಛೇರಿಗೆ ತಲುಪಿಸಿ ಸ್ವೀಕೃತಿಯನ್ನು ಪಡೆದು ಈ ಕಛೇರಿಗೆ ನೀಡಬೇಕು. |

**ಸೂಚನೆ ಮತ್ತು ನಿಬಂಧನೆಗಳು:**

1. ಆಯ್ಕೆಯಾದ ಸಂಸ್ಥೆಗೆ ಮುದ್ರಿಸಬೇಕಾದ ಸಾಹಿತ್ಯವನ್ನು, ಸಿ.ಡಿ ರೂಪದಲ್ಲಿ ನೀಡಲಾಗುವುದು, ಪ್ರತಿ ಪುಟದ ವಿನ್ಯಾಸ ಸಿದ್ಧಪಡಿಸಿ ಈ ಕಛೇರಿಯಿಂದ ಅನುಮೋದನೆ ಪಡೆಯುವುದು.
2. ಮುದ್ರಣಕ್ಕೆ ಹೋಗುವ ಮುನ್ನ ಮೊದಲ ಪ್ರತಿಯ ಅನುಮೋದನೆಯನ್ನು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಛೇರಿಯಿಂದ ಪಡೆದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸುವುದು.

3. ನಮೂದಿಸಿದ ದರವು ಮುದ್ರಣ ವೆಚ್ಚ, ರಾಜ್ಯ ಕಚೇರಿ ಮತ್ತು 34 ಜಿಲ್ಲಾ ಕೇಂದ್ರಗಳಿಗೆ ವಿತರಣೆ ಹಾಗೂ ಎಲ್ಲಾ ತರದ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು, ಮುದ್ರಣ ಕಾರ್ಯಕ್ಕೆ ಯಾವುದೇ ಮುಂಗಡ ಪಾವತಿಸಲಾಗುವುದಿಲ್ಲ.

4. ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್‌ಗಳನ್ನು ದೃಢೀಕರಿಸಿ, ಕೊಟೇಶನ್‌ನೊಂದಿಗೆ, ಕಡ್ಡಾಯವಾಗಿ ಸಲ್ಲಿಸುವುದು.

5. ಸದರಿ ನಮೂನೆಗಳ ಸಾಗಾಣಿಕೆಗಾಗಿ ಈ ಕಛೇರಿಯಿಂದ ಯಾವುದೇ ರೀತಿಯ ಸಾಗಾಣಿಕೆ ವೆಚ್ಚವನ್ನು ಪಾವತಿಸಲಾಗುವುದಿಲ್ಲ.

6. ರೂ. 5,000/-( ಐದು ಸಾವಿರ ರೂ.ಗಳು) ಗಳ EMD ಯನ್ನು ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು-01 ಇವರ ಹೆಸರಿನಲ್ಲಿ Demand Draft ರೂಪದಲ್ಲಿ ನೀಡಬೇಕು ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಗದುಗೊಳಿಸುವಂತಿರಬೇಕು.

7. ಕಾರ್ಯಾದೇಶದಲ್ಲಿ ನೀಡಲಾಗುವ ನಿಖರವಾದ ಪ್ರತಿಗಳ ಸಂಖ್ಯೆ ಮತ್ತು ನಿಖರವಾದ ಪುಟಗಳ ಆಧಾರದ(**Pro-rata)** ಮೇಲೆ ಮತ್ತು ಪಾವತಿ ಪೂರ್ವ ನಿಯಮಾನುಸಾರ ಟಿ.ಡಿ.ಎಸ್ ಕಟಾಯಿಸಿ ಬಿಲ್ಲನ್ನು ಪಾವತಿಸಲಾಗುವುದು.

8. ಕಳಪೆ ಮಟ್ಟದ ಮುದ್ರಣ ಕಾರ್ಯ ಮುದ್ರಣದೋಷ ಕಂಡುಬಂದಲ್ಲಿ ಅಥವಾ ನಿಗದಿತ ಸ್ಪೆಸಿಫಿಕೇಷನ್ ಗಿಂತ ಕಡಿಮೆ ಗುಣಮಟ್ಟದ ಪೇಪರ್ ಮುದ್ರಣ ಕಾರ್ಯಕ್ಕೆ ಬಳಕೆ ಮಾಡಿರುವುದು ಕಂಡು ಬಂದಲ್ಲಿ ಇಂತಹ ನಮೂನೆಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಬಗ್ಗೆ ಯಾವುದೆ ಬಿಲ್ ಪಾವತಿ ಮಾಡುವುದಿಲ್ಲ. ಇದರಿಂದ ಆಗಬಹುದಾದ ನಷ್ಟಗಳಿಗೆ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ.

9. ಕಾರ್ಯದೇಶ ನೀಡಿದ 7 ದಿನಗಳ ಒಳಗಾಗಿ ಮುದ್ರಣ ಮತ್ತು ವಿತರಣೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಪ್ರತಿ ದಿನದ ವಿಳಂಕ್ಕೆ 0.10% ರಂತೆ ದಂಡ ವಿಧಿಸಲಾಗುವುದು. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು ಮತ್ತು **EMD** ಮುಟ್ಟುಗೋಲು ಹಾಕಿಗೊಳ್ಳಲಾಗುವುದು.

10. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸುವುದಿಲ್ಲ ಮತ್ತು ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿರುತ್ತದೆ.

11. ಮುದ್ರಣ ಕಾರ್ಯದ ನಂತರ ಬಿಲ್ ಜೊತೆಯಲ್ಲಿ ಮುದ್ರಣ ಮಾಡಿದ ಸಾಹಿತ್ಯವನ್ನು ಸಿ.ಡಿ ಯಲ್ಲಿ ವಿವರಗಳನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು, ನಮೂನೆಗಳನ್ನು ರಾಜ್ಯ ಕಚೇರಿ ಮತ್ತು 34 ಜಿಲ್ಲಾ ಕೇಂದ್ರಗಳಿಗೆ ವಿತರಣೆ ವಿತರಿಸಿದ ನಂತರ ಪಡೆದ ಸ್ವೀಕೃತಿ ಸಮೇತ ಬಿಲ್ ಸಲ್ಲಿಸಿವುದು.

12. ಮುದ್ರಣ ಹಾಗೂ ಸರಬರಾಜು ಕಾರ್ಯವನ್ನು ಪೂರ್ಣೈಸಿದ ನಂತರ **EMD** ಮೊತ್ತವನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು.

13. ಹೆಚ್ಚಿನ ಮಾಹಿತಿಗಾಗಿ **www.schooleducation.kar.nic.in/** ವೆಬ್‌ಸೈಟ್‌ನ್ನು ವೀಕ್ಷೀಸುವುದು.

(ರಾಜ್ಯ ಯೋಜನಾ ನಿರ್ದೇಶಕರ ಆದೇಶಾನುಸಾರ)

ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ